■ **ಮಲ್ಲಿಕಾರ್ಜುನ ಹೊಸಪಾಳ್ಯ**
ಕಲೆ: ರಘುಪತಿ ಶೃಂಗೇರಿ



ವೆಂಕಟಮ್ಮನಿಗೆ ಇದ್ದಕ್ಕಿದ್ದಂತೆ ಎಚ್ಚರವಾಯಿತು. ತುಸು ಹೊತ್ತು ಆಲಿಸಿದಳು. ರಾತ್ರಿ ಸರೊತ್ತು ದಾಟಿರಬಹುದು. ಎಲ್ಲೆಲ್ಲೂ ನಿಶ್ಯಬ್ದ. ಅದೇ ಆಕೆಯ ಎಚ್ಚರಕ್ಕೆ ಕಾರಣ. ಭಯ ಆವರಿಸಿತು. ಮುಖದಲ್ಲಿ ಉಕ್ಕಿದ ಸೆಕೆ ನೀರನ್ನು ಸೆರಗಿನಿಂದ ಒರೆಸಿಕೊಂಡಳು. ಎಷ್ಟೋ ತಿಂಗಳುಗಳಿಂದ ಹಗಲೂ ಇರುಳೂ ಕಿರುಚಾಟ, ಅರಚಾಟ, ಬೈಗುಳ, ಅಳು, ನರಳುವಿಕೆಯ ಸದ್ದುಗಳಿಂದ ತುಂಬಿದ್ದ ಪದ್ದುವಿನ ಮನೆ ಶಾಂತವಾಗಿತ್ತು.

'ಏನ್ ಗತಿ ಬಂತಪ್ಪಾ ದೇವ್ರೇ ಮೈಲಾರಲಿಂಗ' ಎಂದುಕೊಳ್ಳುತ್ತಾ ಪದ್ದು ಮನೆಯತ್ತ ಧಾವಿಸಿದಳು. ಬಾಗಿಲು ತೆರೆದೇ ಇತ್ತು, ಬೆಳಕೂ ಇತ್ತು. ಹೊಸ್ತಲು ದಾಟಿ ನಡುಮನೆ ಕಡೆ ನೋಡಿದವಳೇ 'ಹಾಂ' ಎನ್ನುತ್ತಾ ಒಂದು ಹೆಜ್ಜೆ ಹಿಂದೆ ಇಟ್ಟಳು. ದಿವಾನ ಕಾಟಿನ ಮೇಲೆ ಮಲಗಿದ್ದ ಮೂರ್ತಪ್ಪ ದೊಡ್ಡ ಕಣ್ಣುಗಳಿಂದ ಈಕೆಯನ್ನೇ ದಿಟ್ಟಿಸುತ್ತಿದ್ದ, ಬಲಗೈ ಚಾಚಿ ಏನನ್ನೋ ಕೇಳುವಂತಿತ್ತು. ಅನುಮಾನಗೊಂಡ ವೆಂಕಟಮ್ಮ ಎರಡು ಹೆಜ್ಜೆ ಮುಂದೆ ಹೋದಳು. ಕಣ್ಣುಗಳು ಬಿರಿದಿದ್ದರೂ ದೇಹದಲ್ಲಿ ಚಲನೆ ಇರಲಿಲ್ಲ. ಇನ್ನೂ ಹತ್ತಿರ ಹೋದಳು. ಮೂರ್ತಪ್ಪನ ಉಸಿರು ನಿಂತುಹೋಗಿತ್ತು.

ತುಸು ದೂರದಲ್ಲೇ ಪದ್ದು ಮೈಮೇಲೆ ನಿಟ್ಟೇ ಇಲ್ಲದಂತೆ ನಿದ್ದೆ ಮಾಡುತ್ತಿದ್ದಳು. 'ಪದ್ದಿ, ಪದ್ದಮ್ಮ' ಎಂದು ಭುಜ ಅಲುಗಾಡಿಸಿದರೂ ಎಚ್ಚರವಿಲ್ಲ. ಮುಖದ ತುಂಬಾ ಸೆಕೆ ನೀರು. ಫ್ಯಾನು ಹಾಕಿ ಆಕೆಯ ಬಟ್ಟೆ ಸರಿಪಡಿಸಿ 'ಎಷ್ಟು ದಿನ ಆಗಿತ್ತವ್ವ ಹಿಂಗ್ ಕಣ್ತುಂಬ ನಿದ್ದೆ ಮಾಡಿ, ಮಲಿಕ್ಕಳವ್ವ' ಎಂದು ತನ್ನಷ್ಟಕ್ಕೇ ಅಂದುಕೊಂಡು ವೆಂಕಟಮ್ಮ ಮನೆಗೆ ಬಂದಳು.

'ಮೈಲಾರಲಿಂಗ ಕೊನಿಗೂ ಪದ್ದಿಗೆ ಕರುಣೆ ತೋರಿಸಿದ' ಎಂದುಕೊಳ್ಳುತ್ತಾ ಸುಮ್ಮನೆ ಕುಳಿತುಬಿಟ್ಟಳು.

***

ಪದ್ದಮ್ಮ ಮೂರ್ತಪ್ಪನದು ಹಿರಿಯರು ಸೇರಿ ಮಾಡಿದ ಮದುವೆ. ಎರಡು ಮನೆಯವರೂ ದೂರದ ಬಂಧುಗಳು. ಅಣ್ಣ ತಮ್ಮಂದಿರ ಜೊತೆಗೇ ಇದ್ದ ಮೂರ್ತಪ್ಪ ಕಷ್ಟಪಟ್ಟು ದುಡಿಯುತ್ತಿರಲಿಲ್ಲ. ಬೈಕಿನ ಮೇಲೆ ಸದಾ ಸುತ್ತುವುದೇ ಕೆಲಸ. ಮನೆಯಲ್ಲಿ ಗಿಣಿಗೇಳಿದಂತೆ ಹೇಳಿದರು. ಅವರು ಬೈದಾಗ ಒಂದೆರಡು ದಿನ ಪುಲಪುಲ ಅಂತ ಅದೂ ಇದೂ ಕೆಲಸ ಮಾಡಿ ಮೂರನೇ ದಿನ ಮತ್ತದೇ ಚಾಳಿ. ಮದುವೆಯ ನಂತರವೂ ಇದೇ ವರ್ತನೆ. ಇತ್ತೀಚೆಗೆ ರೀಲ್ಸ್ ಮಾಡುವುದನ್ನು ಶುರು ಹಚ್ಚಿದ್ದ. ಪದ್ದಮ್ಮನಿಗೂ ಪುಸಲಾಯಿಸುತ್ತಿದ್ದ. ಮದುವೆಯಾದ ಹೊಸತರಲ್ಲಿ ಅವಳೂ ಒಂದೆರಡು ವಿಡಿಯೊ ಮಾಡಲು ಸಹಕರಿಸಿದಳು. ಆದರೆ ಅವುಗಳನ್ನು ಮತ್ತೆ ನೋಡಿದಾಗ ಥುತ್ ಎನಿಸಿ ಸುಮ್ಮನಾದಳು. ಒಂದೆರಡು ವರ್ಷ ಹೀಗೇ ಸಾಗಿತು.

***

ಬೆಳಿಗ್ಗೆ ಎಂಟಾಗಿರಬಹುದು. ಮೂರ್ತಪ್ಪನ ಹೆಣವನ್ನು ಮನೆ ಮುಂದೆ ಮಲಗಿಸಿದ್ದರು. ಬಿಳಿ ವಸ್ತ್ರ ಹೊದಿಸಲಾಗಿತ್ತು. ಹೆಣದ ತಲೆದೆಸೆಯಲ್ಲಿ ಊದಿನಕಡ್ಡಿ ಹೊಗೆಯಾಡುತ್ತಿದ್ದವು. ಕಾಲಿನ ಹತ್ತಿರ ಹೊಸಾ ಮಣ್ಣಿನ ದೀಪ ಉರಿಯುತ್ತಿತ್ತು. ಬಗೆಬಗೆಯ ಹೂವುಗಳ ಪರಿಮಳ. ತುಸು ದೂರದಲ್ಲಿ ಬೆಂಕಿ ಹಚ್ಚಿದ್ದ ದಪ್ಪನೆಯ ಜಾಲಿ ತುಂಡು ಸಣ್ಣಗೆ ಹೊಗೆ ಎಬ್ಬಿಸುತ್ತಿತ್ತು. ಜನ ಬರುತ್ತಿದ್ದರು, ಹೋಗುತ್ತಿದ್ದರು. ಹಂಗೇ ಕೆಲವರು ಮನೆಯ ಒಳಗೂ ಕಣ್ಣಾಯಿಸಿದರು. ಪದ್ದಮ್ಮ ಮಲಗೇ ಇದ್ದಳು.

> ರೀಲ್ಸ್ ಮಾಡುವ ಮೂರ್ತಿಯ ಪ್ರಯತ್ನ ನಡೆದೇ ಇತ್ತು. ಯಾವ ಕಂಟೆಂಟ್ ಮಾಡಿದರೂ ನೋಡುಗರ ಸಂಖ್ಯೆ ಸಾವಿರ ದಾಟುತ್ತಿರಲಿಲ್ಲ. ಏನಾದರೂ ಸ್ಪೆಷಲ್ ಮಾಡಬೇಕು ಅಂತ ಹವಣಿಸುತ್ತಿದ್ದ. ಒಮ್ಮೆ ಬದುವಿನ ಮೇಲೆ ಮೊಬೈಲ್ ಇಟ್ಟು ದೂರದಿಂದ ಜೋರಾಗಿ ಬೈಕಿನ ಮೇಲೆ ಬಂದು ಜರ್ರನೆ ನಿಲ್ಲಿಸುವ ವಿಡಿಯೊ ಮಾಡಲು ಹೋಗಿ ಬ್ಯಾಲೆನ್ಸ್ ಸಿಗದೆ ಬದುವನ್ನು ಹಾರಿ ಗಾಳಿಯಲ್ಲಿ ಸುತ್ತಿ ಬಿದ್ದುಬಿಟ್ಟ. ಅಯ್ಯಯ್ಯಮ್ಮಾ ಎಂಬ ಸದ್ದಿಗೆ ಅಕ್ಕಪಕ್ಕ ಕೆಲಸ ಮಾಡುತ್ತಿದ್ದವರು ಓಡಿಬಂದರು.

ಮೂರ್ತಪ್ಪನ ಅಣತಮಂದಿರು, ಚಿಕಪದೊಡಪಂದಿರು, ಗೆಳೆಯರು, ದೂರದ ನೆಂಟರು, ಊರಿನ ಕೆಲವರು ಬಂದು ತಲಾಕೊಂದೊಂದು ಕೆಲಸಕ್ಕೆ ಕೈಹಾಕಿದ್ದರು. ಯಾರೋ ಬಿದಿರು ಬೊಂಬು ತಂದರು, ಮತ್ಯಾರೋ ತೆಂಗಿನ ಗರಿ ತಂದರು, ಬಾಳೆ ಕಂದು, ಮಾವಿನ ಸೊಪ್ಪು, ಬಿಲ್ಪತ್ರೆ ಬಂದು ಬಿದ್ದವು. ಅನುಭವಸ್ತರು ಚಟ್ಟ ಬಿಗಿಯತೊಡಗಿದರು. ಗುಂಡಿ ತೆಗೆಯುವ ಜೆಸಿಬಿ ಮನೆಯ ಮುಂದಾಸಿ ಹಾದುಹೋಯಿತು. ಗುಂಡಿ ಯಾವ ದಿಕ್ಕಿಗೆ ಇರಬೇಕು, ಎಷ್ಟು ಆಳ ಇರಬೇಕು ಎಂದು ಒಬ್ಬ ಹಿರೇರು ಜೆಸಿಬಿಯನ್ನು ತಡೆದು ನಿಲ್ಲಿಸಿ ಡ್ರೈವರನಿಗೆ ವಿವರಿಸುತ್ತಿದ್ದರು. ಅವನು ತಲೆ ಗುಣಾಕಾಕುತ್ತಿದ್ದ. 'ಗುಂಡಿ ರವಷ್ಟು ದೊಡ್ಡದಾಗೇ ತಗಿ, ದೊಡ್ಡಾಳು' ಎಂಬ ವಾಕ್ಯ ಮುಗಿಯುವ ಮೊದಲೇ ಗುಡು ಗುಡು ಸದ್ದು ಮಾಡುತ್ತಾ ಹೊರಟುಹೋದ.

ಇದೀಗ ಪದ್ದಮ್ಮನ ಮನೆ ಕಡೆಯವರ ಕಾರು ಬಂದಿತು. ಅವರು ಬರುವುದನ್ನೇ ಕಾಯುತ್ತಿದ್ದ ವೆಂಕಟಮ್ಮ ಕೈಹಿಡಿದು ಮನೆ ಒಳಕ್ಕೆ ಕರೆದೊಯ್ದಳು. ಪದ್ದಮ್ಮ ಸರಿ ಹೊತ್ತಿನಲ್ಲಿ ಯಾವ ರೀತಿ ಮಲಗಿದ್ದಳೋ ಅದೇ ಭಂಗಿ. ರವಷ್ಟೂ ಅಲುಗಾಡಿರಲಿಲ್ಲ. ಹೊಟ್ಟೆಯ ಆಳದಿಂದ ಉಸುರು ಬಿಡುತ್ತಿದ್ದಾಳೇನೋ ಅನಿಸುತ್ತಿತ್ತು. 'ಅಯ್ಯೋ ನನ ಕಂದ...' ಎಂದು ಪದ್ದಮ್ಮನ ಅಮ್ಮ ಏನೋ ಹೇಳ ಹೊರಟಳು. ವೆಂಕಟಮ್ಮ ಗದರಿಸಿ 'ಮಲಿಕಂಡ್ಳಿ ಸುಮ್ಕಿರು, ನಿಂದೊಳ್ಳೆ' ಎಂದು ಗದರಿಸಿದಳು.

ಮೂರ್ತಪ್ಪನ ದೂರದ ನೆಂಟರಲ್ಲಿ ಕೆಲವರು ಮನೆ ಒಳಗಡೆ ಕಣ್ಣಾಯಿಸಿ ಮಲಗಿದ್ದ ಪದ್ದುವನ್ನು ನೋಡಿ 'ಇದೇನ್ರೀ ಇದು, ಗಂಡ ಸತ್ತು ಮಲಗವ್ನೆ, ಈವಮ್ಮ ನೋಡಿರೆ ಹಿಂಗೆ ನಿದ್ದೆ ಮಾಡ್ತಾ ಐತೆ, ನಾವೂ ಎಷ್ಟೋ ಕಡೆ ನೋಡಿದ್ದೀವಿ, ಈತರ ಇದೇ ಪಷ್ಟು...' ಎಂದು ಇನ್ನೇನೋ ಹೇಳುತ್ತಿದ್ದಾಗ ಮೂರ್ತಪ್ಪನ ಅಣ್ಣ ಬಂದು ಅವರನ್ನು ಅನಾಮತ್ ಹೊರಗೆ ಕರಕೊಂಡು ಹೋಗಿ 'ಅಣ ನೀವ ಬಂದಿದಿರ ಸಂತೋಸ, ಪದ್ದಮ್ಮನ ಬಗ್ಗೆ ಯಾರೂ ಏನೂ ಮಾತಾಡಂಗಿಲ್ಲ' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿಬಿಟ್ಟರು. ಇಂಥದ್ದೇ ಪ್ರಶ್ನೆಗಳನ್ನು ಗಂಟಲಲ್ಲಿ ಇಟ್ಟುಕೊಂಡು ಕೇಳಲೋ ಬೇಡವೋ ಎಂದುಕೊಳ್ಳುತ್ತಿದ್ದವರೆಲ್ಲಾ ಉಗುಳು ನುಂಗಿಕೊಂಡು ಎಲ್ಲೆಲ್ಲಿದ್ದವರು ಅಲ್ಲಲ್ಲೇ ಗಪ್ಪಾದರು.

ಮನೆ ಮಗ್ಗುಲಿನ ಖಾಲಿ ಜಾಗದಲ್ಲಿ ಮೂವತ್ತು ನಲವತ್ತರ ಅಳತೆಯ ಶಾಮಿಯಾನ ಎದ್ದಿತು. ಒಂದಷ್ಟು ಕುರ್ಚಿಗಳನ್ನು ಹಾಕಿದರು. ಹಬೆಯಾಡುವ ಪಲಾವಿನ ತಪ್ಪಲೆ, ಅಡಿಕೆ ಪಟ್ಟೆಯ ಪ್ಲೇಟುಗಳು, ಕುಡಿಯುವ ನೀರಿನ ವ್ಯವಸ್ಥೆಯಾಯಿತು. ಆ ಕೆಲಸ ಈ ಕೆಲಸ ಮಾಡುತ್ತಿದ್ದವರು, ಅದುನ್ನ ಹಂಗ ಮಾಡಬೇಕು, ಇದುನ್ನ ಹಿಂಗ ಮಾಡಬೇಕು ಎಂದು ಉಸ್ತುವಾರಿ ನೋಡುತ್ತಿದ್ದವರು, ಅಲ್ಲಿ ಇಲ್ಲಿ ಕುಂತಿದ್ದವರು, ನಿಂತಿದ್ದವರು ಹಸಗೊಂಡಿದ್ದ ತಮ್ಮ ಹೊಟ್ಟೆಗೆ ಇಷ್ಟು ಹಾಕಿಕೊಳ್ಳಲು ಅತ್ತ ನಡೆದರು. ವೆಂಕಟಮ್ಮ ಬಲವಂತ ಮಾಡಿದ್ದರಿಂದ ಪದ್ದುವಿನ ಮನೆಯವರೂ ಶಾಮಿಯಾನ ಕಡೆಗೆ ಹೆಜ್ಜೆ ಹಾಕಬೇಕಾಯಿತು. ಈಗ ನಡುಮನೆಯಲ್ಲಿ ಪದ್ದು, ಅಂಗಳದಲ್ಲಿ ಮೂರ್ತಪ್ಪ ಮಾತ್ರ ಉಳಿದರು.

***

ರೀಲ್ಸ್ ಮಾಡುವ ಮೂರ್ತಿಯ ಪ್ರಯತ್ನ ನಡೆದೇ ಇತ್ತು. ಯಾವ ಕಂಟೆಂಟ್ ಮಾಡಿದರೂ ನೋಡುಗರ ಸಂಖ್ಯೆ ಸಾವಿರ ದಾಟುತ್ತಿರಲಿಲ್ಲ. ಏನಾದರೂ ಸ್ಪೆಷಲ್ ಮಾಡಬೇಕು ಅಂತ ಹವಣಿಸುತ್ತಿದ್ದ. ಒಮ್ಮೆ